

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಹೊರನಾಡ ಕನ್ನಡಿಗರ ಮಹಾಮೇಳ

ಹೊರನಾಡ ಕನ್ನಡಿಗರ ಮಹಾಮೇಳವು ವಾರದ ಹಿಂದೆ ಮುಂಬೈನ ಡೊಂಬಿವಿಲಿಯಲ್ಲಿರುವ ಸಾವಿತ್ರಿಬಾಯಿ ಫುಲೆ ಕಲಾಮಂದಿರದಲ್ಲಿ ಜರುಗಿತು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಏರ್ಪಡಿಸಿದ್ದ ಮೂರನೇ ವರ್ಷದ ಸಮ್ಮೇಳನವಿದು. ತಮಿಳುನಾಡು, ಗೋವಾ, ಗುಜರಾತ್ ಮತ್ತು ಮುಂಬೈ ಭಾಗದ ಕನ್ನಡಿಗರು ಅತ್ಯುತ್ಸಾಹದಿಂದ ಭಾಗವಹಿಸಿದ್ದರು. ನಮ್ಮ ಸಮ್ಮುಖದಲ್ಲಿ ನಡೆದ ಮುಕ್ತಾಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದವರು ಖ್ಯಾತ ಪತ್ರಕರ್ತ ಕನ್ನಡದ ಕಟ್ಟಾಳು ಪಾಟೀಲ ಪುಟ್ಟಪ್ಪನವರು.

ಪತ್ರಿಕಾಪ್ರಪಂಚದಲ್ಲಿ ಭೀಷ್ಮಪಿತಾಮಹರೆಂದೇ ಖ್ಯಾತಿಪಡೆದ ಪಾಟೀಲ ಪುಟ್ಟಪ್ಪನವರ ನೆನಪಿನ ಶಕ್ತಿ ಅದ್ಭುತವಾದದ್ದು. ಅವರ ದೇಹಕ್ಕಷ್ಟೇ ಮುಪ್ಪು ಆವರಿಸಿದೆ, ಮೆದುಳು ಮಾತ್ರ ಪ್ರೌಢಾವಸ್ಥೆಯಲ್ಲಿಯೇ ಇದೆ. ಶರೀರ ಜರ್ಝರಿತವಾಗಿದ್ದರೂ ಅವರ ಕನ್ನಡಪರ ಕಾಳಜಿ ಎಳ್ಳಷ್ಟೂ ಕುಂದಿಲ್ಲ. ಅವರ ಮಾತು ಒಂದು ರೀತಿಯಲ್ಲಿ ಸಿಂಹಗರ್ಜನೆ ಇದ್ದಂತೆ. "ನ್ಯಾಯನಿಷ್ಠುರಿ, ದಾಕ್ಷಿಣ್ಯಪರ ನಾನಲ್ಲ, ಲೋಕವಿರೋಧಿ ಶರಣನಾರಿಗೂ ಅಂಜುವನಲ್ಲ" ಎನ್ನುವ ಬಸವಣ್ಣನವರ ನಿಲುವು ಅವರದು. ರಣರಂಗದಲ್ಲಿ ಸೈನಿಕರನ್ನು ಹುರಿದುಂಬಿಸುವ ಸೇನಾಪತಿಯಂತೆ ಅವರು ಕೇಳುಗರನ್ನು ಬಡಿದೆಬ್ಬಿಸಬಲ್ಲರು. ಕನ್ನಡ-ಕನ್ನಡಿಗ-ಕರ್ನಾಟಕ ಕುರಿತಂತೆ ತಮ್ಮ 93 ವರ್ಷದ ಇಳಿವಯಸ್ಸಿನಲ್ಲಿಯೂ ಅಗಾಧ ನೆನಪಿನ ಶಕ್ತಿಯಿಂದಲೇ ಅಂಕಿ ಸಂಖ್ಯೆಗಳನ್ನು ಉಲ್ಲೇಖಿಸಿ ಅಧಿಕಾರಯುತವಾಗಿ ಅವರು ಮಾತನಾಡಬಲ್ಲರು, ವಾದವನ್ನು ಮಂಡಿಸಬಲ್ಲರು: ಪೋರ್ಚುಗೀಸರು ತಮ್ಮ ರಾಜಪುತ್ರಿಯನ್ನು ಮದುವೆಯಾದ ಬ್ರಿಟಿಷ್‌ರಾಜಪುತ್ರನಿಗೆ ಮುಂಬಯಿಯಲ್ಲಿರುವ Bombay Island ನ್ನು ಬಳುವಳಿಯಾಗಿ ನೀಡಿದ್ದರು. ಅದನ್ನು ಆತ ಈಸ್ಟ್ ಇಂಡಿಯಾ ಕಂಪನಿಗೆ ವಹಿಸಿದನು. ಮುಂಬಯಿ ನಗರದಲ್ಲಿ ಮೊತ್ತ ಮೊದಲು ತಮ್ಮ ವ್ಯಾಪಾರ ಮಳಿಗೆಯನ್ನು 1676 ರಲ್ಲಿ ಆರಂಭಿಸಿದ ಈಸ್ಟ್ ಇಂಡಿಯಾ ಕಂಪನಿಯವರು "ತಮ್ಮೊಂದಿಗೆ ವ್ಯವಹಾರ ಮಾಡಬೇಕೆನ್ನುವವರು ಎರಡು ಭಾಷೆಗಳಲ್ಲಿ - ಕನ್ನಡ ಇಲ್ಲವೇ ಪೋರ್ಚುಗೀಜಿನಲ್ಲಿ ಮಾಡಬೇಕು" ಎಂದು ಜಾಹೀರುನಾಮೆ ಹೊರಡಿಸಿದ್ದರು ಎಂಬ ಅಪರೂಪದ ಸಂಗತಿಯನ್ನು ಪುಟ್ಟಪ್ಪನವರು ತಮ್ಮ ಆತ್ಮಚರಿತ್ರೆಯಲ್ಲಿ ಉಲ್ಲೇಖಿಸಿದ್ದಾರೆ.

ಅವರು ತಮ್ಮ ಭಾಷಣದ ಆರಂಭದಲ್ಲಿ ಒಂದು ಸ್ವಾರಸ್ಯಕರ ಪ್ರಸಂಗವನ್ನು ನೆನಪಿಸಿಕೊಂಡರು. ಅಮೆರಿಕೆಗೆ ಪತ್ರಿಕೋದ್ಯಮ ಅಧ್ಯಯನಕ್ಕೆಂದು ಹೊರಟುನಿಂತ ಸಂದರ್ಭ. ಮುಂಬೈನಲ್ಲಿ ವೀಸಾ ಮತ್ತು ವಿದೇಶಿ ವಿನಿಮಯ ಪಡೆಯುವ ಕೆಲಸ ತುರ್ತಾಗಿ ಆಗಬೇಕಾಗಿತ್ತು. ರಿಜರ್ವ್ ಬ್ಯಾಂಕಿಗೆ ಓಡಿದರು. ಅಂದು ಶನಿವಾರ, ವೇಳೆ ಆಗಲೇ ಮಧ್ಯಾಹ್ನ ಒಂದು ಗಂಟೆ. ಆಗ ಅಮೆರಿಕೆಗೆ ಹೋಗುವವರಿಗೆ ಆರು ತಿಂಗಳಿಗೆ 960 ಡಾಲರುಗಳನ್ನು ಮಾತ್ರ ಕೊಡುತ್ತಿದ್ದರು. ಆಗಿನ ಕಾಲದಲ್ಲಿ ಆರು ರೂಪಾಯಿಗಳಿಗೆ ಒಂದು ಡಾಲರ್ ದೊರೆಯುತ್ತಿತ್ತು. ವಿದೇಶಿ ವಿನಿಮಯ ನೀಡುವ ಅಧಿಕಾರಿ ನಿಮಗೆ ಇಷ್ಟೊಂದು ಡಾಲರುಗಳು ಸಿಕ್ಕಲಾರವೆಂದು ಹೇಳಿದಾಗ 'ದಯವಿಟ್ಟು ಲೆಕ್ಕ ಮಾಡಿ' ಎಂದು ವಿನಂತಿಸಿದರು. ಅದುವರೆಗೆ ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದ ಆ ಅಧಿಕಾರಿ ಕನ್ನಡದಲ್ಲಿ ಮಗ್ಗಿ ಎಣಿಸಲಾರಂಭಿಸಿದ. ಅದನ್ನು ಸೂಕ್ಷ್ಮವಾಗಿ ಗಮನಿಸಿದ ಪುಟ್ಟಪ್ಪನವರು ಕೂಡಲೇ ಹಿಂದೆ ಮುಂದೆ ನೋಡದೆ ಕನ್ನಡದಲ್ಲಿ 'ಸುಮ್ನೇ ಸಹಿ ಮಾಡ್ರಿ ಮಾರಾಯ್ರೇ' ಎಂದರು. ಆತ ಇವರ ಮುಖ ನೋಡಿದ; ಮರುಮಾತಿಲ್ಲದೆಯೇ ಸಹಿ ಹಾಕಿ ಡಾಲರ್‌ಗಳನ್ನು ಎಣಿಸಿಕೊಟ್ಟನಂತೆ. ಹೊರನಾಡಿನಲ್ಲಿ ಕನ್ನಡದ ಸೆಳೆತ ಹೇಗಿರುತ್ತದೆಯೆಂಬುದ್ದಕ್ಕೆ ಇದೊಂದು ಉದಾಹರಣೆಯೆಂದು ಹೇಳಿ ಪುಟ್ಟಪ್ಪನವರು ಮಾತು ಮುಂದುವರಿಸಿದರು. ಅವರು ಕೊಟ್ಟ ಉದಾಹರಣೆಯು ಪೂನಾದಿಂದ ಮುಂಬಯಿಗೆ ಎಕ್ಸ್‌ಪ್ರೆಸ್ ಹೈವೇನಲ್ಲಿ ಪಯಣಿಸುವಾಗ ಟೋಲ್‌ಗೇಟ್ ಬಳಿ ನಮಗಾದ ಅನುಭವವನ್ನು ನೆನಪಿಗೆ ತಂದಿತು. ನಮ್ಮ ಕಾರಿನ ಚಾಲಕ ಟೋಲ್ ಪಾವತಿಸುವಾಗ ಕೌಂಟರ್‌ನಲ್ಲಿದ್ದ ಕ್ಯಾಷಿಯರ್ ನಮ್ಮನ್ನು ನೋಡಿ 'ನಾನೂ ಕರ್ನಾಟಕದವನೇ, ಕನ್ನಡ ಮಾತನಾಡಬಲ್ಲೆ' ಎಂದು ಅಭಿಮಾನದಿಂದ ಹೇಳಿ ಕೈಮುಗಿದ ದೃಶ್ಯ ಕಣ್ಮುಂದೆ ಸುಳಿಯಿತು.

ಸಮಾರಂಭ ಮುಗಿದ ನಂತರ ಸ್ಥಳೀಯ ಕನ್ನಡ ಸಂಘಟನೆಗಳ ಮತ್ತು ಶಾಲಾಕಾಲೇಜು ವಿದ್ಯಾರ್ಥಿಗಳಿಂದ ಆಕರ್ಷಕವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ದೂರದ ರಾಮದುರ್ಗದಿಂದ ಬಂದಿದ್ದ ಡೊಳ್ಳು ಹಾಡಿನ ತಂಡದ ಕಲಾವಿದ ನಿರೂಪಿಸಿದ ಘಟನೆ ಸಭೆಯನ್ನು ನಗೆಗಡಲಲ್ಲಿ ಮುಳುಗಿಸಿತು: ತಾಯಿಯೊಬ್ಬಳು ಒಮ್ಮೆ ಪಂಡರಾಪುರದ ಜಾತ್ರೆಗೆ ಮಗನನ್ನು ಕರೆದೊಯ್ದಿದ್ದಳು. ವಿದೇಶೀ ಮಹಿಳೆಯೊಬ್ಬಳು ವಿಠ್ಠಲನ ದೇವಾಲಯವನ್ನು ನೋಡಿ ಮೆಚ್ಚಿ "Wonderful" ಎಂದು ಉದ್ಗರಿಸಿದಳಂತೆ. ಅರೆಬರೆ ಬಟ್ಟೆ ಧರಿಸಿದ್ದ ಆ ವಿದೇಶೀ ಮಹಿಳೆಯನ್ನು ನೋಡಿ ಅಸಹನೆಗೊಂಡಿದ್ದ ಆ ತಾಯಿ ಇಂಗ್ಲೀಷ್ ಪದದ ಅರ್ಥ ಗ್ರಹಿಸದೆ ಏರುದನಿಯಲ್ಲಿ 'ವಂಡರ್‌ಫುಲ್' ಅಲ್ಲಾ ಕಣೇ 'ಪಂಡರಾಪುರ್' ಎಂದು ಆಕೆಗೆ ತಿಳಿಹೇಳಿದಳಂತೆ!

ಸಿರಿಗೆರೆಯ ನಮ್ಮ ಶಾಲಾ ಕಾಲೇಜು ವಿದ್ಯಾರ್ಥಿಗಳೂ ಸಹ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ| ಚಂದ್ರಶೇಖರ ಕಂಬಾರ ವಿರಚಿತ 'ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು' ಎಂಬ ನಾಟಕವನ್ನು ಅಭಿನಯಿಸಿದರು.

- 2 -

'ಅತಿಯಾಸೆ ಗತಿಗೇಡು' ಎಂಬಂತೆ ನಾಟಕದಲ್ಲಿ ಅಲಿಬಾಬನ ಅಣ್ಣ ಖಾಸಿಂ ಹೆಚ್ಚಿನ ಸಂಪತ್ತನ್ನು ದೋಚಲು ಹೋಗಿ ಕಳ್ಳರ ಕೈಗೆ ಸಿಕ್ಕು ದುರಂತಕ್ಕೆ ಒಳಗಾಗುತ್ತಾನೆ. ಅಲಿಬಾಬ ಮಾತ್ರ ಅತಿಯಾಸೆ ಪಡದೆ ಅಗತ್ಯಕ್ಕೆ ಎಷ್ಟೋ ಅಷ್ಟು ಮಾತ್ರ ಪಡೆದು ಸುಖಿಯಾಗಿರುತ್ತಾನೆ. ನಾಟಕವನ್ನು ನೋಡುತ್ತಿರುವಾಗ ನಮ್ಮ ಮನಸ್ಸಿನ ಒಳತೋಟಿಯಲ್ಲಿ ಉದ್ಭವಿಸಿದ ಪ್ರಶ್ನೆಗಳು ಹಲವು: ಅಲಿಬಾಬ ಅತಿಯಾಸೆಪಡದಿದ್ದರೂ ತನ್ನದಲ್ಲದ ಹಣವನ್ನು ತಂದದ್ದು ಎಷ್ಟರಮಟ್ಟಿಗೆ ಸರಿ? ಅದೂ ಸಹ ಕಳ್ಳತನವೇ ಅಲ್ಲವೇ? ದಾರಿಯಲ್ಲಿ ಬಿದ್ದಿದ್ದರೂ ಪರಧನವನ್ನು ಮುಟ್ಟಬಾರದು ಎಂದು ಭಾರತೀಯ ದರ್ಶನಗಳು ಪ್ರತಿಪಾದಿಸುತ್ತವೆ. ಕಳ್ಳರು ನಲವತ್ತೇ ಮಂದಿ ಏಕೆ? ಜಾಸ್ತಿ ಏಕಿರಬಾರದಾಗಿತ್ತು? ಪ್ರಾಯಶಃ ಆಗಿನ ಕಾಲಮಾನದ ದೃಷ್ಟಿಯಿಂದ ನಲವತ್ತು ದೊಡ್ಡ ಸಂಖ್ಯೆಯೇ ಇದ್ದಿರಬಹುದು. ಈಗ ನಲವತ್ತಲ್ಲ, ನಲವತ್ತರ ಮುಂದೆ ಎಷ್ಟು ಸೊನ್ನೆಗಳನ್ನು ಸೇರಿಸಬೇಕೋ ಗೊತ್ತಿಲ್ಲ. ಅಷ್ಟು ಹಗಲುಗಳ್ಳರು ಈ ದೇಶದ ಉದ್ದಗಲಕ್ಕೆ ತುಂಬಿಕೊಂಡಿದ್ದಾರೆಂದು ಮುಂಬಯಿಯ ನಮ್ಮ ಇನ್ನೊಂದು ಕಾರ್ಯಕ್ರಮದಲ್ಲಿ ಹೇಳಿದ ಮಾರನೆಯ ದಿನವೇ ಭಾರತದ ವಾಯುಸೇನೆ ಇಟಲಿಯಲ್ಲಿ ಕೊಂಡ ಹೆಲಿಕಾಪ್ಟರ್ ಹಗರಣ ವರದಿಯಾಗಿತ್ತು.

ಎರಡು ವಾರಗಳ ಹಿಂದೆ ಇಂಗ್ಲೆಂಡಿನಿಂದ ಆತ್ಮೀಯ ಶಿಷ್ಯರು ಕೆಲವರು ಮಠಕ್ಕೆ ಬಂದಿದ್ದರು. 70 ರ ದಶಕದಲ್ಲಿ ವಿಯೆನ್ನಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಾಗಿದ್ದ ಕಾಲದಿಂದ ನಮ್ಮ ಅವರ ಪರಿಚಯ. ವೃತ್ತಿಯಲ್ಲಿ ವೈದ್ಯರಾದ ಅವರಿಂದ ಲೋಕಾಭಿರಾಮವಾಗಿ ಮಾತನಾಡುವಾಗ ಆಶ್ಚರ್ಯ ಹಾಗೂ ಆಘಾತಕಾರಿ ಸಂಗತಿಯೊಂದು ತಿಳಿಯಿತು. ಹೆಸರನ್ನು ಹೇಳಲು ಇಚ್ಛಿಸದ ಅವರು ಕರ್ನಾಟಕದ ರಾಜಕಾರಣಿಯೊಬ್ಬರು ಇಂಗ್ಲೆಂಡಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಡೆದ ಘಟನೆಯನ್ನು ವಿವರಿಸಿದರು. ಅಲ್ಲಿಯ ಕನ್ನಡಪರ ಸಂಘಟನೆಗಳಿಗೆ ಸರಕಾರದಿಂದ ಧನಸಹಾಯವನ್ನು ಮಂಜೂರು ಮಾಡಿಸಿಕೊಡುವುದಾಗಿ ಆ ರಾಜಕಾರಣಿ ಭರವಸೆಯನ್ನು ಕೊಟ್ಟರಂತೆ. ನಂತರ ಖಾಸಗಿಯಾಗಿ ಮಾತನಾಡುವಾಗ ಸರಕಾರದಿಂದ ಮುಂಜೂರು ಮಾಡಿಸಿಕೊಡುವ ಹಣದಲ್ಲಿ ತನಗೆ ಇಂತಿಷ್ಟು ಪರ್ಸೆಂಟ್ ಹಣ ಕೊಡಬೇಕೆಂದು ಕೇಳಿದರಂತೆ. ಇದರಿಂದ ಅಸಹ್ಯಗೊಂಡ ಅಲ್ಲಿಯ ಸಂಘಟಕರು ಆ ರಾಜಕಾರಣಿಯ ನಿರ್ಲಜ್ಜ ಬೇಡಿಕೆಯನ್ನು ಸಾರಾಸಗಟಾಗಿ ತಿರಸ್ಕರಿಸಿದರಂತೆ. ಕನ್ನಡದ ಅಭಿವೃದ್ಧಿಯ ಹೆಸರಿನಲ್ಲಿಯೂ ಊಹೆಗೆ ನಿಲುಕದ ರೀತಿಯಲ್ಲಿ ಹೇಗೆ ಭ್ರಷ್ಟಾಚಾರ ತನ್ನ ಕಬಂಧಬಾಹುಗಳನ್ನು ಸಪ್ತಸಮುದ್ರಗಳಾಚೆಗೂ ಚಾಚಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ?

21.2.2013

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ